# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 79 |
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 15-02-2022 |
| ಉತ್ತರಿಸುವ ಸಚಿವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ "ಮಾತೃಪೂರ್ಣ ಯೋಜನೆ" ಜಾರಿಯಲ್ಲಿದೆಯೇ; | ಹೌದು. ರಾಜ್ಯದಲ್ಲಿ "ಮಾತೃಪೂರ್ಣ ಯೋಜನೆ" ಜಾರಿಯಲ್ಲಿರುತ್ತದೆ. |
| ಆ) | ಈ ಯೋಜನೆಯಡಿ ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಏನೇನು ಆಹಾರ ನೀಡಲಾಗುವುದು; ಅದರ ಪ್ರಮಾಣ ಎಷ್ಟು ; | ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಅಂಗನವಾಡಿ ಕೇಂದ್ರದಲ್ಲಿಯೇ ಒಂದು - ಪೂರ್ಣ ಬಿಸಿಯೂಟವನ್ನು ನೀಡಲಾಗುತ್ತದೆ. ಈ ಪೂರ್ಣ ಊಟದಲ್ಲಿ ಅನ್ನ, ಸಾಂಬಾರ್, ಪಲ್ಯದ ಜೊತೆಗೆ ಬೇಯಿಸಿದ ಮೊಟ್ಟೆ, 200 ಎಂ.ಎಲ್. ಹಾಲು ಮತ್ತು ಶೇಂಗಾ ಚಿಕ್ಕಿಯನ್ನು ನೀಡಲಾಗುವುದು.<br><br>ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಬಿಸಿಯೂಟ ತಯಾರಿಸದಿರುವುದರಿಂದ ಪ್ರತಿ ಫಲಾನುಭವಿಗೆ ಕಚ್ಚಾ ಆಹಾರ ಸಾಮಗ್ರಿಗಳನ್ನು ಮನೆಗೆ ವಿತರಿಸಲಾಗುತ್ತಿದೆ. ಪ್ರಸ್ತುತ ಮನೆಗೆ ಆಹಾರ ಪದಾರ್ಥಗಳನ್ನು ವಿತರಿಸುತ್ತಿರುವುದರಿಂದ ಜಿಲ್ಲೆಯಿಂದ ಜಿಲ್ಲೆಗೆ ಆಹಾರ ಪದಾರ್ಥಗಳಲ್ಲಿ ವ್ಯತ್ಯಾಸವಿರುತ್ತದೆ. ಮಾದರಿಗಾಗಿ ತುಮಕೂರು ಜಿಲ್ಲೆಯಲ್ಲಿ ವಿತರಿಸುತ್ತಿರುವ ಆಹಾರ ಪದಾರ್ಥಗಳ ಮಾಹಿತಿ ಕೆಳಕಂಡಂತಿದೆ.<br><br>ಪ್ರತಿ ಮಾಹೆಗೆ :<br><br>ಹಾಲಿನ ಪುಡಿ – 500 ಗ್ರಾಂ.<br>ಸಕ್ಕರೆ – 250 ಗ್ರಾಂ.<br>ಹೆಸರುಕಾಳು – 500 ಗ್ರಾಂ.<br>ಕಡ್ಲೆಬೀಜ – 250 ಗ್ರಾಂ.<br>ಬೆಲ್ಲ – 1000 ಗ್ರಾಂ.<br>ಕಡ್ಲೆಕಾಳು – 500 ಗ್ರಾಂ.<br>ತೊಗರಿಬೇಳೆ – 250 ಗ್ರಾಂ.<br>ಸಾಂಬಾರ್ ಪುಡಿ – 100 ಗ್ರಾಂ.<br>ಅಕ್ಕಿ – 2750 ಗ್ರಾಂ.<br>ಮೊಟ್ಟೆ – 25 |

| | | |
|---|---|---|
| ಇ) | ಈ ಯೋಜನೆಯು ಯಾವುದಾದರೂ ಜಿಲ್ಲೆಯಲ್ಲಿ ವಿಫಲವಾಗಿದೆಯೇ; ಹಾಗಿದ್ದಲ್ಲಿ; ಯಾವ-ಯಾವ ಜಿಲ್ಲೆಗಳಲ್ಲಿ ವಿಫಲವಾಗಿದೆ? (ಮಾಹಿತಿ ಒದಗಿಸುವುದು.) | ಇಲ್ಲ. |

ಸಂಖ್ಯೆ: ಮಮಇ 29 ಐಸಿಡಿ 2022

Halappa B.A.

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.